# ಏನೇನು ದಾನವ ಮಾಡಲಿ, ಹರಿ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 428.
2. **Note:** This song is not available in the books of Shri Betageri Krishna Sharma and Shri Bengeri Huchha Rayaru also in the books of Sri. Pavanje Guru Rao.
3. **Note:** Singer has followed these lyrics.

ರಾಗ: ಪಂತುವರಾಳಿ ತಾಳ: ಛಾಪು

ಏನೇನು ದಾನವ ಮಾಡಲಿ, ಹರಿ
ಧ್ಯಾನಕ್ಕೆ ಸಮನಾದ ದಾನಂಗಳುಂಟೆ ‖ ಪ ‖

ಶತಕೋಟಿ ಕನ್ಯಾ ಪ್ರದಾನವ ಮಾಡಲಿ
ಅತಿಶಯ ಉದಕ ದಾನವ ಮಾಡಲಿ
ಮತಿಶುದ್ಧನಾಗಿ ಭೂದಾನವ ಮಾಡಲಿ
ಕೃತಿ ರಮಣ ನಿನ್ನ ಧ್ಯಾನಕ್ಕೆ ಸರಿಯುಂಟೆ ‖ ೧ ‖

ದಿನಕ್ಕೊಂದು ಸಾವಿರ ಗೋದಾನ ಮಾಡಲಿ
ಅನುದಿನ ಅನ್ನ ದಾನವ ಮಾಡಲಿ
ಘನವಾಗಿ ಸುವರ್ಣ ದಾನವ ಮಾಡಲಿ
ವನಜನಾಭನೆ ನಿನ್ನ ಧ್ಯಾನಕ್ಕೆ ಸರಿಯುಂಟೆ ‖ ೨ ‖

ಸಾದರದಿ ತರ್ಕ ವ್ಯಾಕರಣ ಪೇಳಲಿ
ವೇದ ಗೀತ ಭಾಷ್ಯವನೋದಲಿ
ಸಾಧಿಸಿ ಸ್ನಾನ ಜಪಂಗಳ ಮಾಡಲಿ
ಮಾಧವ ನಿನ್ನ ಧ್ಯಾನಕ್ಕೆ ಸರಿಯುಂಟೆ ‖ ೩ ‖

ಉತ್ತಮವಾದ ವಸ್ತ್ರ ದಾನವ ಮಾಡಲಿ
ಮುತ್ತು ಮಾಣಿಕ್ಯ ದಾನವ ಮಾಡಲಿ
ಅತ್ಯಂತ ವಿದ್ಯಾ ಪ್ರದಾನವ ಮಾಡಲಿ

ಚಿತ್ತಜ ಪಿತನ ಧ್ಯಾನಕ್ಕೆ ಸರಿಯುಂಟೆ || ೪ ||

ನಾನಾ ತೀರ್ಥಗಳಲಿ ಸ್ನಾನವ ಮಾಡಲಿ
ಕಾನನದೊಳಗೆ ತಪವ ಮಾಡಲಿ
ಜ್ಞಾನದಿಂದ ಶಾಸ್ತ್ರಾರ್ಥ ಮಾಡಲಿ
ನಿನ್ನ ಧ್ಯಾನಕ್ಕೆ ಸರಿಯುಂಟೆ ಪುರಂದರ ವಿಠಲ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಕೃತಿ ರಮಣ** = ಲಕ್ಷ್ಮಿಯ ಒಂದು ರೂಪ ಕೃತಿ, ಅನಿರುದ್ಧನು ಕೃತಿ ರಮಣ

**Classification:** Keethane
**Ankita:** purandara vittala
**Location:** NA
**Category:** Bhakti
**Sub-Category:** dAna, Krishna, Dhyana, niru, bhumi, govu, anna, bangara, veda, bhagavadgeethe, snana, japa, Madhava, muttu, vidya, tirtha, kaadu, tapa, jnana, shastra,
**Pravachana:** NA
**Explanation:** NA